ದಿನಾಂಕಃ 16-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಸಿ ಎಲ್ ಎಂ ವಕೀಲರಿಂದ,

1) ಕರಿಸಣ್ಣೇಗೌಡ ರವರಿಗೆ ಮೂರು ಜನ ಮಕ್ಕಳು. ವಾದಿಗಳು ಕರಿಸಣ್ಣೇಗೌಡ ರವರ ಮಕ್ಕಳು. ಕರಿಸಣ್ಣೇಗೌಡ ರವರಿಗೆ ಮೂರು ಜನ ಅಣ್ಣತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ. 289 ರಲ್ಲಿ ವಾದಿಗಳಿಗೆ ಸ್ವಲ್ಪ ಜಮೀನು ಇರುತ್ತದೆ. ವಾದಿಗಳ ತಂದೆಗೆ ಯಾವ ಆಸ್ತಿಗಳು ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

2) ದೇವಮ್ಮ ರವರಿಗೆ ಸರ್ವೇ ನಂ. 289 ರಲ್ಲಿ 1 ಎಕರೆ 12 1/2 ಗುಂಟೆ ಮತ್ತು ಸರ್ವೇ ನಂ. 290 ರಲ್ಲಿ 2 ಎಕರೆ 5 ಗುಂಟೆ ಆಸ್ತಿ ಬಂದಿರುತ್ತದೆ ಎಂದರೆ ಸರಿ. ಸದರಿ ವಿಸ್ತೀರ್ಣದಲ್ಲಿ ದೇವಮ್ಮ ಕುಟುಂಬದವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ವಾದಿಗಳಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ